ಸದರಿ ಪ್ರಸ್ತಾವನೆಗೆ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ/153/ವೆಚ್ಚ–5/2009, ದಿನಾಂಕ: 23–03–2009ರ ಪ್ರಕಾರ ಆರ್ಥಿಕ ಇಲಾಖೆಯ ಸಹಮತಿ ಪಡೆದು ಹೊರಡಿಸಲಾಗಿದೆ.

<u>ಕರ್ನಾಟಕ ವಿಧಾನಸಭೆ</u>
<u>13ನೇ ವಿಧಾನ ಸಭೆ</u>
<u>3ನೇ ಅಧಿವೇಶನ</u>

595 ಶ್ರೀ ಮಹದೇವ ಪ್ರಸಾದ್ ಹೆಚ್.ಎಸ್.(ಗುಂಡ್ಲುಪೇಟೆ)
ಡಾ. ಎಸ್. ಆಚಾರ್ಯ ಮಾನ್ಯ ಗೃಹ ಸಚಿವರು

ಅ) ಗುಂಡ್ಲುಪೇಟೆ ತಾಲ್ಲೂಕು, ಬೇಗೂರು ಹೋಬಳಿ, ಬೆಂಗಳೂರು ಗ್ರಾಮದ ಹೊರ ಪೊಲೀಸ್ ಠಾಣೆಯನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಹೌದು.

ಆ) ಎಷ್ಟು ವರ್ಷಗಳಿಂದ ಈ ಪ್ರಸ್ತಾವನೆ ಪರಿಶೀಲನೆಯಲ್ಲಿದೆ?

2009ನೇ ಸಾಲಿನಲ್ಲಿ ಡಿಜಿ & ಐಜಿಪಿ ರವರು ರಾಜ್ಯದ ವಿವಿಧ ಸ್ಥಳಗಳಲ್ಲಿ ಪೊಲೀಸ್ ಠಾಣೆಗಳನ್ನು ಮಂಜೂರು ಮಾಡಲು ಕಳುಹಿಸಿರುವ ಕ್ರೋಢೀಕೃತ ಪ್ರಸ್ತಾವನೆಯಲ್ಲಿ ಇದು ಸೇರಿರುತ್ತದೆ.

ಇ) ಸದರಿ ಪೊಲೀಸ್ ಠಾಣೆಯನ್ನು ಶೀಘ್ರ ಮೇಲ್ದರ್ಜೆಗೇರಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಹಣಕಾಸಿನ ಲಭ್ಯತೆಗೆ ಅನುಗುಣವಾಗಿ ಕ್ರೋಢೀಕೃತ ಪ್ರಸ್ತಾವನೆಯನ್ನು ಪರಿಗಣಿಸಲಾಗುವುದು.

<u>ಕರ್ನಾಟಕ ವಿಧಾನಸಭೆ</u>

596 ಶ್ರೀ ಶ್ರೀನಿವಾಸ (ವಾಸು) ಎಸ್.ಆರ್.(ಗುಬ್ಬಿ)
ಎಸ್. ಸುರೇಶ್ ಕುಮಾರ್ ಮಾನ್ಯ ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು.

ಅ) ತುಮಕೂರು ಜಿಲ್ಲೆ, ಗುಬ್ಬಿ ಪಟ್ಟಣಕ್ಕೆ ಯು.ಜಿ.ಡಿ. ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಪರಿಶೀಲನೆಯಲ್ಲಿದೆ.

ಆ) ಹಾಗಿದ್ದಲ್ಲಿ ಯು.ಜಿ.ಡಿ. ಸರ್ವೆ ಕಾರ್ಯವು ಮುಗಿದಿದೆಯೇ;

ಸರ್ವೆ ಕಾರ್ಯ ಮುಗಿದಿದೆ.